ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ-3/28/2022-23

ದಿನಾಂಕ 21-07-2022

**"ಪ್ರಮಾಣಿತ ಅಂಚೆ ಮೂಲಕ"**

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 30-06-2022ರಂದು ನಡೆದ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ:30-06-2022ರಂದು ಬೆಳಗ್ಗೆ 11-30 ಗಂಟೆಗೆ, ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿಯ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ, ನಡವಳಿಯಲ್ಲಿ ದಾಖಲಿಸಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ದಾಖಲಿಸಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ, ಆದುದರಿಂದ. ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 12-08-2022ರ ಒಳಗಾಗಿ, ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು-570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ.

AC Forwarding letter

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ದಿನಾಂಕ: 30-06-2022 ರಂದು ಪೂರ್ವಾಹ್ನ 11.30 ಗಂಟೆಗೆ ನಡೆದ ವಿದ್ಯಾ ವಿಷಯಕ ಪರಿಷತ್ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳು.

ಸಭೆಗೆ ಹಾಜರಾಗಿದ್ದ ಸದಸ್ಯರುಗಳು:

1. ಪ್ರೊ.ಜಿ.ಹೇಮಂತ್‌ಕುಮಾರ್, ಮಾನ್ಯ ಕುಲಪತಿಗಳು – ಅಧ್ಯಕ್ಷರು
2. ಶ್ರೀ ಸಿ.ಎನ್.ಮಂಜೇಗೌಡ, ವಿಧಾನ ಪರಿಷತ್ ಸದಸ್ಯರು – ಸದಸ್ಯರು
3. ಡಾ. ಜಿ.ಗೋವಿಂದರಾಜು – ಸದಸ್ಯರು
4. ಡಾ. ಜೆ.ಎನ್.ವೆಂಕಟೇಶ್ – ಸದಸ್ಯರು
5. ಡಾ. ಬಿ.ರಾಜಣ್ಣ – ಸದಸ್ಯರು
6. ಡಾ. ನಿರ್ಮಲ.ಹೆಚ್.ಎಂ – ಸದಸ್ಯರು
7. ಡಾ. ವೆಂಕಟೇಶಯ್ಯ – ಸದಸ್ಯರು
8. ಶ್ರೀ ಹೆಚ್.ಎಸ್.ಗಂಗೇಗೌಡ – ಸದಸ್ಯರು
9. ಡಾ. ಜಯಶಂಕರ್.ಎನ್ – ಸದಸ್ಯರು
10. ಪ್ರೊ. ಸೌಮ್ಯ ಈರಪ್ಪ.ಕೆ – ಸದಸ್ಯರು
11. ಶ್ರೀ ಟಿ.ನಾಗರಾಜು – ಸದಸ್ಯರು
12. ಡಾ. ಪ್ರಶಾಂತ್.ಎಸ್.ಟಿ – ಸದಸ್ಯರು
13. ಪ್ರೊ. ಕೆ.ವಿ.ಅಯ್ಯಣ್ಣ – ಸದಸ್ಯರು
14. ಶ್ರೀ ಎಂ.ಪಿ.ಶಶಿಕುಮಾರ್ – ಸದಸ್ಯರು
15. ಡಾ. ಭಾಗ್ಯಲಕ್ಷ್ಮಿ – ಸದಸ್ಯರು
16. ಡಾ. ಬಿಂದು ಅನಿಲ್ ಥಾಮಸ್ – ಸದಸ್ಯರು
17. ಶ್ರೀ ಶಿವಕುಮಾರ್.ಎಂ – ಸದಸ್ಯರು
18. ಶ್ರೀ ಎಂ.ಸಿ.ರಾಜಶೇಖರ್ – ಸದಸ್ಯರು
19. ಪ್ರೊ. ಹೆಚ್. ರಾಜಶೇಖರ – ಸದಸ್ಯರು
20. ಪ್ರೊ. ಮುಜಾಫರ್ ಹೆಚ್ ಅಸ್ಸಾದಿ – ಸದಸ್ಯರು
21. ಪ್ರೊ. ಹೆಚ್.ಟಿ. ಬಸವರಾಜಪ್ಪ – ಸದಸ್ಯರು
22. ಪ್ರೊ. ಟಿ.ಆರ್.ಮಾರುತಿ – ಸದಸ್ಯರು
23. ಪ್ರೊ. ಎಸ್.ಮದಿಅಳಗನ್ – ಸದಸ್ಯರು
24. ಪ್ರೊ. ಬಿ. ಶಂಕರ್ – ಸದಸ್ಯರು
25. ಪ್ರೊ. ವೈ.ಬಿ.ಬಸವರಾಜು – ಸದಸ್ಯರು
26. ಪ್ರೊ. ಎಂ.ಜಿ.ಮಂಜುನಾಥ್ – ಸದಸ್ಯರು
27. ಪ್ರೊ. ಎಂ.ಎಸ್.ಶೇಖರ್ – ಸದಸ್ಯರು
28. ಡಾ. ಸರಸ್ವತಿ, ಗ್ರಂಥಪಾಲಕರು – ಸದಸ್ಯರು
29. ಪ್ರೊ. ಗುರುಸಿದ್ದಯ್ಯ, ನಿರ್ದೇಶಕರು (ಪ್ರಭಾರ) ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ – ಸದಸ್ಯರು
30. ಪ್ರೊ. ಎನ್.ಕೆ.ಲೋಕನಾಥ್, ನಿರ್ದೇಶಕರು, ಪಿ.ಎಂ.ಇ.ಬಿ ಹಾಗೂ ನಿರ್ದೇಶಕರು, (ಪ್ರಭಾರ) ಕಾಲೇಜು ಅಭಿವೃದ್ಧಿ ಮಂಡಳ – ಸದಸ್ಯರು
31. ಡಾ. ಕೃಷ್ಣಯ್ಯ, ನಿರ್ದೇಶಕರು (ಪ್ರಭಾರ), ದೈಹಿಕ ಶಿಕ್ಷಣ – ಸದಸ್ಯರು
32. ಪ್ರೊ. ಎ.ಪಿ.ಜ್ಞಾನಪ್ರಕಾಶ್, ಕುಲಸಚಿವ (ಪರೀಕ್ಷಾಂಗ) – ಸದಸ್ಯರು
33. ಮುಸ್ಕನ್ ಭಾನು – ಸದಸ್ಯರು
34. ರೋಹನ್.ವಿ – ಸದಸ್ಯರು
35. ಉದಯ್.ಎಂ.ಎಲ್ – ಸದಸ್ಯರು
36. ಅನು ಎಸ್.ಜೆ – ಸದಸ್ಯರು
37. ಪ್ರೊ. ಆರ್. ಶಿವಪ್ಪ – ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ

ಸಭೆಯಲ್ಲಿ ಗೈರುಹಾಜರಾಗಿದ್ದವರು:

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ.
   ಕರ್ನಾಟಕ ಸರ್ಕಾರ ಇವರ ಪರವಾಗಿ
   ಶ್ರೀ ಕೆ.ಸಿ ವೀರಭದ್ರಯ್ಯ ಜಂಟಿ ನಿರ್ದೇಶಕರು.
   ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ.
   ಕರ್ನಾಟಕ ಸರ್ಕಾರ ಬೆಂಗಳೂರು.
3. ಶ್ರೀ ಸಿ.ಎಸ್.ನಿರಂಜನ್ ಕುಮಾರ್, ವಿಧಾನ ಸಭಾ ಸದಸ್ಯರು.
4. ಶ್ರೀ ಎಲ್.ನಾಗೇಂದ್ರ, ವಿಧಾನ ಸಭಾ ಸದಸ್ಯರು.
5. ಶ್ರೀ ಎಂ. ಶ್ರೀನಿವಾಸ ವಿಧಾನ ಸಭಾ ಸದಸ್ಯರು.
6. ಶ್ರೀ ಪ್ರೀತಂ ಜೆ ಗೌಡ, ವಿಧಾನ ಸಭಾ ಸದಸ್ಯರು.
7. ಡಾ. ಕೆ.ವಿ.ಸುರೇಶ.
8. ಶ್ರೀಮತಿ ನಾಗರತ್ನಮ್ಮ..ಕೆ.
9. ಶ್ರೀ ನಂದೀಶ್.ಎಸ್.
10. ಪ್ರೊ. ಜಿ.ಆರ್.ಜನಾರ್ಧನ.
11. ಡಾ. ಸಂಗೀತ ಗಜಾನನ ಭಟ್, ಹಣಕಾಸು ಅಧಿಕಾರಿಗಳು.
12. ಅನುಷಾ.ಪಿ.ಜಿ.
13. ಎಂ.ಪವನ್ ಕುಮಾರ್.

ಮೊದಲಿಗೆ ಮಾನ್ಯ ಕುಲಸಚಿವರು ಶಿಕ್ಷಣ ಮಂಡಳಿಯ ಮೊದಲನೇ ಸಾಮಾನ್ಯ ಸಭೆಗೆ ಹಾಜರಾಗಿರುವ ಎಲ್ಲಾ ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ನಂತರ ಮಾನ್ಯ ಕುಲಪತಿಯವರು ಕಾರ್ಯಸೂಚಿಯಂತೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ |
|---|---|
| **I** | **ಹಿಂದಿನ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ:** |
| I.I | ದಿನಾಂಕ: 19-03-2022ರಂದು ಜರುಗಿದ 102ನೇ ವಾರ್ಷಿಕ ಘಟಿಕೋತ್ಸವದ ಪೂರ್ವಭಾವಿಯಾಗಿ ಏರ್ಪಡಿಸಿದ ಶಿಕ್ಷಣ ಮಂಡಳಿಯ ವಿಶೇಷ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | **ದಿನಾಂಕ: 19-03-2022ರಂದು ಜರುಗಿದ 102ನೇ ವಾರ್ಷಿಕ ಘಟಿಕೋತ್ಸವದ ಪೂರ್ವಭಾವಿಯಾಗಿ ಏರ್ಪಡಿಸಿದ ಶಿಕ್ಷಣ ಮಂಡಳಿಯ ವಿಶೇಷ ಸಭೆಯ ನಡವಳಿಯನ್ನು ದೃಢೀಕರಿಸಲಾಯಿತು.** |
| I.II | ದಿನಾಂಕ: 31-03-2022ರಂದು ನಡೆದ ಶಿಕ್ಷಣ ಮಂಡಳಿ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | **ದಿನಾಂಕ: 31-03-2022ರಂದು ನಡೆದ ಶಿಕ್ಷಣ ಮಂಡಳಿ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸಲಾಯಿತು.** |
| **II** | **ಸಿಂಡಿಕೇಟ್ ಅಥವಾ ಕುಲಪತಿಗಳು ಮಂಡಿಸಿರುವ ವಿಷಯಗಳು:** |
| II.1 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2022-23ನೇ ಶೈಕ್ಷಣಿಕ ವರ್ಷದಿಂದ "ಕ್ಲಿನಿಕಲ್ ರಿಪ್ರೊಡಕ್ಷನ್ ಜೆನಿಟಿಕ್ಸ್"ನಲ್ಲಿ ನಾಲ್ಕು ಸೆಮಿಸ್ಟರ್ ಎಂ.ಎಸ್ಸಿ ಪದವಿ ಕೋರ್ಸ್‌ಅನ್ನು ಪ್ರಾರಂಭಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಜೆನೆಟಿಕ್ಸ್ ಮತ್ತು ಜೆನೋಮಿಕ್ಸ್ ಅಧ್ಯಕ್ಷರು ತಮ್ಮ ಪತ್ರದಲ್ಲಿ ವಿಭಾಗದ ಮೂಲಸೌಕರ್ಯ, ಮೂಲ ಸೌಲಭ್ಯಗಳು ಮತ್ತು ವಿಭಾಗದ ಗಮನಾರ್ಹ ಸಂಶೋಧನಾ ಪ್ರಗತಿಯನ್ನು ಪರಿಗಣಿಸಿ 2022-23ನೇ ಶೈಕ್ಷಣಿಕ ವರ್ಷದಿಂದ |

| | |
|---|---|
| | "ಕ್ಲಿನಿಕಲ್ ರಿಪ್ರೊಡಕ್ಷನ್ ಜೆನಿಟಿಕ್ಸ್"ನಲ್ಲಿ ನಾಲ್ಕು ಸೆಮಿಸ್ಟರ್‌ಗಳ ಎಂ.ಎಸ್ಸಿ ಪದವಿ ಕೋರ್ಸ್‌ಅನ್ನು ವಿಶ್ವವಿದ್ಯಾನಿಲಯ ಮತ್ತು ಮೆಡಿವೇವ್, ಐವಿಎಫ್ ಮತ್ತು ಫರ್ಟಿಲಿಟಿ ರಿಸರ್ಚ್ ಹಾಸ್ಪಿಟಲ್, ಮೈಸೂರು ಆಸ್ಪತ್ರೆಯವರ ಸಹಯೋಗದೊಂದಿಗೆ ಪ್ರಾರಂಭಿಸಲು ಹಾಗೂ ಒಡಂಬಡಿಕೆಯನ್ನು ಮಾಡಿಕೊಳ್ಳಬೇಕಾಗಿದೆ ಎಂದು ತಿಳಿಸಿದರು. |
| **ತೀರ್ಮಾನ** | **ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2022-23ನೇ ಶೈಕ್ಷಣಿಕ ವರ್ಷದಿಂದ "ಕ್ಲಿನಿಕಲ್ ರಿಪ್ರೊಡಕ್ಷನ್ ಜೆನಿಟಿಕ್ಸ್"ನಲ್ಲಿ ನಾಲ್ಕು ಸೆಮಿಸ್ಟರ್‌ಗಳ ಎಂ.ಎಸ್ಸಿ ಪದವಿ ಕೋರ್ಸ್ ಪ್ರಾರಂಭಿಸಲು ಸಲ್ಲಿಸಿರುವ ಪ್ರಸ್ತಾವನೆಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.2 | 2022-23ನೇ ಶೈಕ್ಷಣಿಕ ಸಾಲಿನಿಂದ "ಡಿಫೆನ್ಸ್ ಸ್ಟಡೀಸ್ ವಿಷಯದಲ್ಲಿ ಕೋರ್ಸ್‌ನ್ನು ಆರಂಭಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಶ್ರೀ.ಸಿ.ಎಲ್ ಆನಂದ ಅಪರ ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ ಇವರು ತಮ್ಮ ಪತ್ರದಲ್ಲಿ ಪದವಿ, ಸ್ನಾತಕೋತ್ತರ ಪದವಿ ಹಾಗೂ ಎಂ.ಫಿಲ್ ಕೋರ್ಸ್‌ಗಳಲ್ಲಿ "ಡಿಫೆನ್ಸ್ ಸ್ಟಡೀಸ್" ಎಂಬ ವಿಷಯದಲ್ಲಿ ಕೋರ್ಸ್‌ಗಳನ್ನು ಆರಂಭಿಸಲು ಪಠ್ಯಕ್ರಮ ಮತ್ತು ವಿಷಯಗಳನ್ನು ಸಿದ್ಧಪಡಿಸಲಾಗಿದೆ ಎಂದು ತಿಳಿಸಿರುತ್ತಾರೆ. ಈ ಸಂಬಂಧ ಪ್ರೊ.ಜಿ.ವೆಂಕಟೇಶ್ ಕುಮಾರ್ ಹಾಗೂ ಪ್ರೊ. ಮುಜಾಫರ್ ಅಸ್ಸಾದಿರವರ ಅಭಿಪ್ರಾಯವನ್ನು ಪಡೆಯಲಾಗಿದೆ. ಸದರಿಯವರು Defence & Strategic Studies, M.Phil ಹೊರತು ಪಡಿಸಿ ಉಳಿದ ಕೋರ್ಸ್ B.A and MA in Defence & Strategic Studies ಅನ್ನು ರಾಷ್ಟ್ರೀಯ ಶಿಕ್ಷಣ ನೀತಿ ಹಿನ್ನೆಲೆಯಲ್ಲಿ ಆರಂಭಿಸಲು ಶಿಫಾರಸು ಮಾಡಿರುತ್ತಾರೆ ಎಂದು ತಿಳಿಸಿ, ಇವರ ಕೋರಿಕೆಯನ್ನು ಪ್ರಾಧಿಕಾರಗಳ ಅನುಮೋದನೆಗೆ ತರಲಾಗಿದೆ ಎಂದು ತಿಳಿಸಿದರು. |
| **ತೀರ್ಮಾನ** | **2022-23ನೇ ಶೈಕ್ಷಣಿಕ ಸಾಲಿನಿಂದ "ಡಿಫೆನ್ಸ್ ಸ್ಟಡೀಸ್ ವಿಷಯದಲ್ಲಿ ಕೋರ್ಸ್‌ನ್ನು ಆರಂಭಿಸುವ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.3 | "ಶ್ರೀಮತಿ ಲತಾದೇವಿ ಮತ್ತು ಪ್ರೊ.ಬಿ.ಹೆಚ್.ಸುರೇಶ್ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX) ಪ್ರಕಾರ, ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿ ಹಣವನ್ನು M.Com. ಪದವಿ ಪರೀಕ್ಷೆಯಲ್ಲಿ ಅಧ್ಯಯನ ಮಾಡಿ, ಮೊದಲನೇ ಬಾರಿಗೆ ಮೂರನೇ ರ್‍ಯಾಂಕ್ ಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡಬೇಕೆಂದು ಕೋರಿರುವ ಮನವಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.4 | "ಪ್ರೊ. ಜಿ. ವೆಂಕಟೇಶ್ ಕುಮಾರ್ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX) ಪ್ರಕಾರ, ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿ ಹಣವನ್ನು ಸ್ನಾತಕೋತ್ತರ ಮನೋವಿಜ್ಞಾನ ವಿಷಯವನ್ನು ಕನ್ನಡ ಮಾಧ್ಯಮದ ಪರೀಕ್ಷೆಯಲ್ಲಿ ಅಧ್ಯಯನ ಮಾಡಿ ಅತಿ ಹೆಚ್ಚು ಅಂಕ ಗಳಿಸಿದ ಒಬ್ಬ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡಬೇಕೆಂದು ಕೋರಿರುವ ಮನವಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |

| II.5 | ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ.<br>("ಶ್ರೀಮತಿ ಪದ್ಮ ಸತ್ಯನಾರಾಯಣ ಚಿನ್ನದ ಪದಕ", "ಶ್ರೀಮತಿ ಎಂ.ಬಿ. ಅನುರಾಧ ಎಂ. ಚೌಡೆಗೌಡ ಚಿನ್ನದ ಪದಕ") |
|---|---|

| ಕ್ರಮ ಸಂಖ್ಯೆ | ದಾನಿಗಳ ಹೆಸರು ಮತ್ತು ವಿಳಾಸ | ದತ್ತಿಗಳ ಹೆಸರು | ಷರತ್ತುಗಳು | ಪಾವತಿಸಿರುವ ಮೊತ್ತ |
|---|---|---|---|---|
| 01 | Smt.Radha Sundaresan<br>No.350, Jeeva Street,<br>VGP Layout,<br>Phase 1, Uthandi,<br>Chennai:600119 | "ಶ್ರೀಮತಿ ಪದ್ಮ ಸತ್ಯನಾರಾಯಣ ಚಿನ್ನದ ಪದಕ" | **Female student** who has passed M.Sc.in Physics, Securing Second Highest Marks. | 1,00,000/- |
| 02 | "ಶ್ರೀಮತಿ. ಎಂ.ಬಿ.ಅನುರಾಧಾ<br>#454, 10ನೇ ಮೇನ್ ರೋಡ್, ಕೆ.ಸಿ.ನಗರ,<br>ಮೈಸೂರು-570 011. | "ಶ್ರೀಮತಿ. ಎಂ.ಬಿ.ಅನುರಾಧಾ ಎಂ.ಚೌಡೆಗೌಡ ಚಿನ್ನದ ಪದಕ" | M.A.in Sociology in First Attempt and securing Highest Marks | 1,00,000/- |

**ತೀರ್ಮಾನ**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) **(IX)** ಪ್ರಕಾರ, ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡಲು ದಾನಿಗಳು ದತ್ತಿಯ ನಿಬಂಧನೆಯಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿಯ ಹಣವನ್ನು ಮೇಲೆ ನಮೂದಿಸಿರುವ ದಾನಿಗಳ ದತ್ತಿಗಳ ಷರತ್ತಿನಂತೆ ಸಂಬಂಧಿತ ವಿಷಯ/ಪತ್ರಿಕೆ **M.Sc.in Physics** ನಲ್ಲಿ ಎರಡನೇ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿ ಹಾಗೂ **M.A.in Sociology**ಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾಗಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡಬೇಕೆಂದು ಕೋರಿರುವ ಮನವಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಮೋದಿಸಿತು.

| II.6 | ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ.<br>("ಡಾ. ಬಿ.ಆರ್. ಅಂಬೇಡ್ಕರ್ ಚಿನ್ನದ ಪದಕ", "ಪ್ರೊ. ಎನ್. ನಿಂಗಯ್ಯ ಚಿನ್ನದ ಪದಕ") |
|---|---|

| ಕ್ರಮ ಸಂ. | ದಾನಿಗಳ ಹೆಸರು ಮತ್ತು ವಿಳಾಸ | ದತ್ತಿಗಳ ಹೆಸರು | ಷರತ್ತುಗಳು | ಪಾವತಿಸಿರುವ ಮೊತ್ತ |
|---|---|---|---|---|
| 01 | ಶ್ರೀ.ಎಸ್.ಕೆ.ಗುರುಪಾದಸ್ವಾಮಿ<br>#3172, 1ನೇ ಕ್ರಾಸ್, 20ನೇ ಮುಖ್ಯ ರಸ್ತೆ, ವಿಜಯನಗರ 2ನೇ ಹಂತ, ಮೈಸೂರು-570 017. | "ಡಾ.ಬಿ.ಆರ್.ಅಂಬೇಡ್ಕರ್ ಚಿನ್ನದ ಪದಕ" | M.A.in Philosophy in First attempt securing Highest Marks. | 1,00,000/- |
| 02 | "ಶ್ರೀಮತಿ. ಜೆ.ಮಹಾದೇವಮ್ಮ<br>#789, 'ನಿರೂಪ", ಬೋಗಾದಿ 2ನೇ ಹಂತ, (ಉತ್ತರ), ಮೈಸೂರು-570 026. | "ಪ್ರೊ.ಎನ್.ನಿಂಗಯ್ಯ ಚಿನ್ನದ ಪದಕ" | M.Sc.in Anthropology First Attempt and securing Highest Marks | 1,00,000/- |

| | |
|---|---|
| ತೀರ್ಮಾನ | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX) ಪ್ರಕಾರ, ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡಲು ದಾನಿಗಳು ದತ್ತಿಯ ನಿಬಂಧನೆಯಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿಯ ಹಣವನ್ನು ಮೇಲೆ ನಮೂದಿಸಿರುವ ಎರಡು ದಾನಿಗಳ ದತ್ತಿಗಳ ಷರತ್ತಿನಂತೆ ಸಂಬಂಧಿತ ವಿಷಯ/ಪತ್ರಿಕೆ M.A.in Philosophy ಮತ್ತು M.Sc.in Anthropology ಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡಬೇಕೆಂದು ಕೋರಿರುವ ಮನವಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.7 | **ಗಡಿನಾಡು ಕನ್ನಡಿಗರಿಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉಚಿತ ಶಿಕ್ಷಣ ಕೋರಿ.** |
| | ಮಾನ್ಯ ಕುಲಪತಿಗಳು ಮಾತನಾಡಿ, ಡಾ.ಶಂಕರ್.ಆರ್ ಗೇರುಮಾಳಂ ಇವರು ತಮ್ಮ ಪತ್ರದಲ್ಲಿ ತಮಿಳುನಾಡಿನ ಗಡಿನಾಡು ಪ್ರದೇಶ ತಾಳವಾಡಿಯಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರು ಉನ್ನತ ವಿದ್ಯಾಭ್ಯಾಸಕ್ಕಾಗಿ ಕರ್ನಾಟಕ ರಾಜ್ಯಕ್ಕೆ ಬಂದರೆ ಬಿ.ಎ, ಬಿ.ಎಡ್, ಎಂ.ಎ, ಎಂ.ಎಡ್, ಪಿಹೆಚ್.ಡಿ ವ್ಯಾಸಂಗಕ್ಕೆ ಇಲ್ಲಿನ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಶುಲ್ಕ ಕಟ್ಟಬೇಕು ಮತ್ತು ವಿದ್ಯಾರ್ಥಿ ವೇತನಕ್ಕೂ ತೊಂದರೆಯಾಗುತ್ತಿದೆ ದಯಮಾಡಿ ಅವರಿಗೆ ವಿಶ್ವವಿದ್ಯಾನಿಲಯವು ಉಚಿತವಾಗಿ ಶಿಕ್ಷಣ ನೀಡಬೇಕೆಂದು ಮನವಿ ಮಾಡಿರುತ್ತಾರೆ ಎಂದು ತಿಳಿಸಿದರು.<br><br>ಮುಂದುವರೆದು, ಉಚಿತ ಶಿಕ್ಷಣ ನೀಡುವ ಸಂಬಂಧ ಸರ್ಕಾರದಿಂದ ಯಾವುದೇ ನಿರ್ದೇಶನ/ಆದೇಶ ಇಲ್ಲದಿರುವುದರಿಂದ, ಪ್ರವೇಶಾತಿ ಸಮಯದಲ್ಲಿ ಸಂಬಂಧಿಸಿದ ಅಧಿಕಾರಿಗಳಿಂದ ಗಡಿನಾಡು ಕನ್ನಡಿಗ ಪ್ರಮಾಣ ಪತ್ರ ಪಡೆದಂತಹ ವಿದ್ಯಾರ್ಥಿಗಳಿಗೆ ಅಲ್ಪ ಪ್ರಮಾಣದಲ್ಲಿ ಅಂದರೆ ರೂ.270/-ಗಳನ್ನು Eligibility Certificate Fee ಆಗಿ ತೆಗೆದು ಕೊಂಡು ಪ್ರವೇಶಾತಿ ನೀಡುತ್ತಿದ್ದೇವೆ ಎಂದು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | **ಡಾ॥ ಶಂಕರ್. ಆರ್, ಗೇರುಮಾಳಂ ಇವರು ಗಡಿನಾಡು ಕನ್ನಡಿಗರಿಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉಚಿತ ಶಿಕ್ಷಣ ನೀಡುವ ಕುರಿತು ಸಲ್ಲಿಸಿರುವ ಮನವಿಯನ್ನು ಸರ್ಕಾರದ ಮುಂದಿನ ಆದೇಶಕ್ಕೆ ಕಳುಹಿಸಲು ವಿದ್ಯಾ ವಿಷಯಕ ಸಭೆಯು ಅನುಮೋದಿಸಿತು.** |
| II.8 | ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಗೆ ಪ್ರಭಾರ ಪ್ರಾಂಶುಪಾಲರುಗಳನ್ನು ನೇಮಕಾತಿ ಮಾಡುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಒಟ್ಟು 7 ಘಟಕ ಕಾಲೇಜುಗಳು ಸೇರ್ಪಡೆಯಾಗಿದ್ದು, ಇದರ ಆಡಳಿತ ಹಾಗೂ ಶೈಕ್ಷಣಿಕ ಹಿತದೃಷ್ಠಿಯಿಂದ ಘಟಕ ಕಾಲೇಜುಗಳ ಅಧ್ಯಾಪಕರುಗಳನ್ನು ಪ್ರಭಾರ ಪ್ರಾಂಶುಪಾಲರುಗಳನ್ನಾಗಿ ನೇಮಕ ಮಾಡುವ ಸಂಬಂಧ ಪ್ರೊ. ಡಿ. ಆನಂದ್‌ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿತ್ತು, ಸದರಿ ಸಮಿತಿ ನೀಡಿದ ವರದಿಯಲ್ಲಿ ಘಟಕ ಕಾಲೇಜುಗಳ ಹಿರಿಯ ಅಧ್ಯಾಪಕರುಗಳನ್ನು Rotation ಆಧಾರದ ಮೇಲೆ ಪ್ರಭಾರ ಪ್ರಾಂಶುಪಾಲರನ್ನಾಗಿ ನೇಮಕ ಮಾಡುವಂತೆ ಶಿಫಾರಸು ಮಾಡಿರುತ್ತದೆ ಎಂದು ತಿಳಿಸಿದರು.<br><br>ಶ್ರೀ.ಎಂ.ಸಿ ರಾಜಶೇಖರ್‌ರವರು ಮಾತನಾಡಿ, ಒಬ್ಬರನ್ನೇ ಮುಂದುವರೆಸಿದರೆ ಏನು ತೊಂದರೆ ಎಂದು ಪ್ರಶ್ನಿಸಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು Rotation ಆಧಾರದ ಮೇಲೆ ನೇಮಕ ಮಾಡಿದರೆ ಇತರ ಅಧ್ಯಾಪಕರುಗಳಿಗೂ ಅವಕಾಶ ಲಭಿಸುತ್ತದೆ ಎಂದು ತಿಳಿಸಿದರು. |

| | |
|---|---|
| | ಶ್ರೀ ಸಿ.ಎನ್.ಮಂಜೇಗೌಡರವರು ಮಾತನಾಡಿ, ಪ್ರಭಾರ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿದ ಮೇಲೆ ಅವರು ಮತ್ತೆ ಅಧ್ಯಾಪಕರಾಗಿ ಕಾರ್ಯನಿರ್ವಹಿಸಲು ಮುಜುಗರವಾಗುತ್ತದೆ ಅದುದರಿಂದ ಮತ್ತೊಮ್ಮೆ ಸಮಿತಿಗೆ ವರದಿಯನ್ನು ಪರಿಶೀಲಿಸಲು ಸೂಚಿಸುವಂತೆ ತಿಳಿಸುವುದು ಸೂಕ್ತ ಎಂದು ತಿಳಿಸಿದರು.<br><br>ಪ್ರೊ. ಕೆ.ವಿ.ಅಯ್ಯಣ್ಣರವರು ಮಾತನಾಡಿ, ಕೆಲವು ಸ್ನಾತಕೋತ್ತರ ವಿಭಾಗದಲ್ಲಿ ಒಬ್ಬರೇ ಅಧ್ಯಾಪಕರು ಸುಮಾರು 10ವರ್ಷಗಳಿಂದ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿರುವುದನ್ನು ನಾವು ಕಂಡಿರುತ್ತೇವೆ **ಪ್ರಭಾರ** ಪ್ರಾಂಶುಪಾಲರ ಹುದ್ದೆ ಒಬ್ಬರಿಗೆ ಮೀಸಲಿಡದೆ ಇತರ ಅಧ್ಯಾಪಕರೂ ಸಹ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಡಬೇಕಾಗಿ ಮನವಿ ಮಾಡಿದರು.<br><br>ಶ್ರೀ.ಎಂ.ಸಿ ರಾಜಶೇಖರ್‌ರವರು ಮಾತನಾಡಿ, ಹೆಚ್ಚು ಪಿಹೆಚ್.ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಹಾಗೂ ಹೆಚ್ಚು ಸಂಶೋಧನಾ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಅಧ್ಯಾಪಕರನ್ನು ಪರಿಗಣಿಸಿ ಅವರನ್ನು ಏಕೆ **ಪ್ರಭಾರ** ಪ್ರಾಂಶುಪಾಲರನ್ನಾಗಿ ನೇಮಕ ಮಾಡಬಾರದು ಎಂದು ಸಭೆಗೆ ತಿಳಿಸಿದರು. Rotation ಆಧಾರದ ಮೇಲೆ ಪ್ರಾಂಶುಪಾಲರನ್ನು ನೇಮಕ ಮಾಡುವುದರಿಂದ ಅವರ ಅವಧಿ ಮುಗಿದ ನಂತರ ಪುನಃ ಅಧ್ಯಾಪಕರಾಗಿ ಕರ್ತವ್ಯನಿರ್ವಹಿಸಲು ಮುಜುಗರವೆನ್ನಿಸಬಹುದು ಎಂದು ತಿಳಿಸಿದರು.<br>ಸುಧೀರ್ಘ ಚರ್ಚೆಯ ನಂತರ ಎಲ್ಲಾ ಸದಸ್ಯರು Rotation ಆಧಾರದ ಮೇಲೆ **ಪ್ರಭಾರ** ಪ್ರಾಂಶುಪಾಲರನ್ನು ನೇಮಕ ಮಾಡುವುದು ಸೂಕ್ತ ಎಂದು ತಿಳಿಸಿದರಿಂದ ಶ್ರೀ ಸಿ.ಎನ್.ಮಂಜೇಗೌಡರವರು ಸಹ ಸಮ್ಮತಿಸಿದರು. |
| **ತೀರ್ಮಾನ** | **ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಗೆ ಜೇಷ್ಠತಾ ಪಟ್ಟಿಯಲ್ಲಿ ಸೇವಾ ಹಿರಿತನ ಹೊಂದಿರುವ ಅರ್ಹ ಅಧ್ಯಾಪಕರನ್ನು ರೋಟೇಷನ್ ಆಧಾರದ ಮೇಲೆ ಪ್ರಭಾರ ಪ್ರಾಂಶುಪಾಲರನ್ನಾಗಿ ನೇಮಿಸಲು/ ನೇಮಕ ಮಾಡಲು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಮೋದನೆ ನೀಡಿತು.** |
| II.9 | 2019-20 ಮತ್ತು 2021-22ನೇ ಶೈಕ್ಷಣಿಕ ಸಾಲಿಗೆ ವಿಜಯ ಶಿಕ್ಷಣ ಮಹಾವಿದ್ಯಾಲಯ, ಪಾಂಡವಪುರ, ಮಂಡ್ಯ ಜಿಲ್ಲೆ ಈ ಕಾಲೇಜಿನ ಸಂಯೋಜನೆ ಮುಂದುವರೆಸಲು ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ನೀಡಿರುವ ವರದಿಯನ್ನು ಅನುಮೋದಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ವಿಜಯ ಶಿಕ್ಷಣ ಮಹಾವಿದ್ಯಾಲಯ 2019-20ನೇ ಸಾಲಿನ ಸಂಯೋಜನೆಯನ್ನು ಮುಂದುವರೆಸಲು ಸಂಯೋಜನಾ ಶುಲ್ಕ ಪಾವತಿಸಿರುತ್ತದೆ ನಂತರ ಸ್ಥಳೀಯ ವಿಚಾರಣಾ ಸಮಿತಿ ಭೇಟಿ ನೀಡಿ ಪರಿಶೀಲಿಸಿ ವರದಿ ಸಿದ್ಧಪಡಿಸಿತ್ತು. ಆದರೆ ಎನ್‌ಸಿಟಿಇ ನವದೆಹಲಿ ಕಾಲೇಜಿನ ಮಾನ್ಯತೆಯನ್ನು ಹಿಂಪಡೆದ ಹಿನ್ನೆಲೆಯಲ್ಲಿ 2019-20ನೇ ಶೈಕ್ಷಣಿಕ ಸಾಲಿನ ಆದೇಶವನ್ನು ತಡೆಹಿಡಿಯಲಾಯಿತು, ಇದರಿಂದ 2020-21ನೇ ಸಾಲಿನಲ್ಲಿ ಪ್ರವೇಶಾತಿ ಸಹ ಮಾಡಿಕೊಂಡಿರುವುದಿಲ್ಲ, ಕಾಲೇಜಿನವರು ಎನ್‌ಸಿಟಿಇ ವಿರುದ್ಧ ಉಚ್ಛನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತಾರೆ.<br><br>ನಂತರ ಎನ್‌ಸಿಟಿಇ ನವದೆಹಲಿಯವರು ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಪರಿಶೀಲಿಸಿ ಕಾಲೇಜಿಗೆ ಭೇಟಿ ನೀಡಿ 2021-22ರ ಶೈಕ್ಷಣಿಕ ಸಾಲಿಗೆ 02 ಯುನಿಟ್ (100 ವಿದ್ಯಾರ್ಥಿಗಳಿಗೆ) ಪ್ರವೇಶಾತಿ ಅನುಮತಿಯನ್ನು ನೀಡಿರುತ್ತದೆ ಎಂದು ತಿಳಿಸಿದರು. |

| | |
|---|---|
| | ಶ್ರೀ. ಶಶಿಕುಮಾರ್‌ರವರು ಮಾತನಾಡಿ, ವಿಜಯ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕಳೆದ ಬಾರಿ ಮಾನ್ಯತೆ ಇಲ್ಲದಿದ್ದಾಗ ಪ್ರವೇಶಾತಿ ಮಾಡಿಕೊಳ್ಳದೇ ಇರುವ ಬಗ್ಗೆ ಮಾಹಿತಿಯನ್ನು ಪಿಎಂಇಬಿ ನಿರ್ದೇಶಕರಿಂದ ಪಡೆದರು. |
| ತೀರ್ಮಾನ | **2019-20 ಮತ್ತು 2021-22ನೇ ಶೈಕ್ಷಣಿಕ ಸಾಲಿಗೆ ವಿಜಯ ಶಿಕ್ಷಣ ಮಹಾವಿದ್ಯಾಲಯ, ಪಾಂಡವಪುರ, ಮಂಡ್ಯ ಜಿಲ್ಲೆ ಈ ಕಾಲೇಜಿಗೆ ಸಂಯೋಜನೆ ಮುಂದುವರೆಸಲು ನೀಡಿರುವ ಘಟನೋತ್ತರ ಆದೇಶವನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು.** |
| II.10 | ಸಿಬಿಸಿಎಸ್ (ಯುಜಿ) ವಿನಿಯಮಾವಳಿಯ ಮೇಕಪ್ ಪರೀಕ್ಷೆಗೆ ತಿದ್ದುಪಡಿ ತರುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಕೋವಿಡ್-19 ಹಿನ್ನೆಲೆಯಲ್ಲಿ ಕಳೆದೆರಡು ವರ್ಷಗಳಿಂದ ಶೈಕ್ಷಣಿಕ ವೇಳಾಪಟ್ಟಿಯು ಮುಂದೆ ಹೋಗಿರುವುದರಿಂದ ಇದನ್ನು ಸರಿಪಡಿಸುವ ದೃಷ್ಠಿಯಿಂದ ಪ್ರಸಕ್ತ ಸಾಲಿನಿಂದ ಅನ್ವಯವಾಗುವಂತೆ ಪ್ರವೇಶಾತಿಗೆ ತಡವಾಗಿರುತ್ತದೆ. ಈ ಹಿನ್ನೆಲೆಯಲ್ಲಿ 1 ರಿಂದ 5ನೇ ಸೆಮಿಸ್ಟರ್‌ಗಳವರೆಗೂ ಮೇಕಪ್ ಪರೀಕ್ಷೆಗಳು ನಡೆಸುವುದಾಗಿ ನಂತರ 6ನೇ ಸೆಮಿಸ್ಟರ್‌ನಲ್ಲಿ ಮೇಕಪ್ ಪರೀಕ್ಷೆಗಳು ಮಾಡುವುದು ಬೇಡ ಎಂಬ ಅಭಿಪ್ರಾಯವನ್ನು ತಿಳಿಸಿದರು.<br>ವಿದ್ಯಾ ವಿಷಯಕ ಪರಿಷತ್ ಸಭೆಯ ನಾಮನಿರ್ದೇಶಿತ ವಿದ್ಯಾರ್ಥಿನಿಯಾದ ಮುಸ್ಕನ್ ಭಾನು ರವರು ಮಾತನಾಡಿ, ವಿದ್ಯಾರ್ಥಿಗಳು ಪರೀಕ್ಷೆಯನ್ನು ಮುಗಿಸಿಕೊಂಡು ಹೊರ ದೇಶಕ್ಕೆ ಹೋದರೆ ಅಂತಹ ವಿದ್ಯಾರ್ಥಿಗಳಿಗೆ ತೊಂದರೆಯಾಗುವ ಸಾಧ್ಯತೆ ಇರುತ್ತದೆ ಎಂದು ತಮ್ಮ ಅಭಿಪ್ರಾಯ ತಿಳಿಸಿದರು.<br>ಕುಲಸಚಿವ (ಪರೀಕ್ಷಾಂಗ)ರವರು 6ನೇ ಸೆಮಿಸ್ಟರ್‌ನಲ್ಲಿ ಮೇಕಪ್ ಪರೀಕ್ಷೆಗಳನ್ನು ನಡೆಸುವುದರಿಂದ ಆಗುವ ಅನಾನುಕೂಲಗಳನ್ನು ಸಭೆಗೆ ವಿವರಿಸಿದರು. |
| ತೀರ್ಮಾನ | **UG-CBCS-Regulationನ ಪ್ರಕರಣ 17ನ್ನು ಕೈಬಿಟ್ಟಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿತು.** |
| II.11 | 2022-23ನೇ ಶೈಕ್ಷಣಿಕ ಸಾಲಿಗೆ ಎಸ್.ಬಿ.ಆರ್.ಆರ್, ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತಾ), ಮೈಸೂರು, ಕಾಲೇಜಿನ ಸ್ನಾತಕೋತ್ತರ ಕೋರ್ಸುಗಳನ್ನು ಸಂಸ್ಥೆಯ ಬೇರೊಂದು ಕಟ್ಟಡಕ್ಕೆ ಬದಲಾವಣೆ ಮಾಡಲು ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡಿ ಅಲ್ಲಿನ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿ ಸಲ್ಲಿಸಿರುವ ವರದಿ. |
| | ಮಾನ್ಯ ಕುಲಪತಿಗಳು ಮಾತನಾಡಿ, ಎಸ್ ಬಿ ಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕಟ್ಟಡವನ್ನು ಬದಲಾವಣೆ ಮಾಡಲು ಕೋರಿರುತ್ತಾರೆ. ಇದಕ್ಕೆ ಸಮಿತಿಯು ಸಹ ಭೇಟಿ ನೀಡಿ ವರದಿಯನ್ನು ನೀಡಿರುತ್ತದೆ ಎಂದು ತಿಳಿಸಿದರು.<br>ಶ್ರೀ ಸಿ.ಎನ್.ಮಂಜೇಗೌಡ, ವಿಧಾನ ಪರಿಷತ್ ಸದಸ್ಯರು ಮಾತನಾಡಿ, ಎಸ್.ಬಿ.ಆರ್.ಆರ್, ಮಹಾಜನ ಪ್ರಥಮ ದರ್ಜೆ ಕಾಲೇಜು ಇವರು ವಿಶ್ವವಿದ್ಯಾನಿಲಯದ ಷರತ್ತುಗಳನ್ನು ಪೂರೈಸಿದ ನಂತರ ಸಭೆಗೆ ವಿಷಯವನ್ನು ಮಂಡಿಸುವಂತೆ ತಿಳಿಸಿದರು.<br>ಶ್ರೀ. ಶಶಿಕುಮಾರ್‌ರವರು ಮಾತನಾಡಿ, ಸ್ಥಳೀಯ ವಿಚಾರಣಾ ಸಮಿತಿ ಕಾಲೇಜಿಗೆ ಭೇಟಿ ನೀಡಿ ಸಲ್ಲಿಸಿರುವ ವರದಿಯನ್ನು ಲಗತ್ತಿಸಿಲ್ಲದಿರುವುದನ್ನು ಗಮನಿಸಿ, ವರದಿಯ ಪ್ರತಿಯನ್ನು ಸಲ್ಲಿಸುವಂತೆ ತಿಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ ಸದಸ್ಯರನ್ನು ಯಾವುದೇ ಸಮಿತಿಗೆ ಆಹ್ವಾನಿಸದೇ ಇರುವುದನ್ನು ಪ್ರಶ್ನಿಸಿದರು ಹಾಗೂ ಸಮಿತಿಗೆ ಆಹ್ವಾನಿಸದಿದ್ದ ಪಕ್ಷದಲ್ಲಿ ಸಮಿತಿಯು ಎಲ್ಲೆಲ್ಲಿ ಭೇಟಿ ನೀಡಿ ವರದಿಯನ್ನು ನೀಡಿರುತ್ತದೆ ಅದನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಪ್ರೊಜೆಕ್ಟರ್ ಮೂಲಕವಾದರೂ ವೀಕ್ಷಿಸಲು ಅನುವು ಮಾಡಿಕೊಡುವಂತೆ ಸಭೆಯ ಗಮನಕೆ ತಂದರು. |
| ತೀರ್ಮಾನ | **2022-23ನೇ ಶೈಕ್ಷಣಿಕ ಸಾಲಿಗೆ ಎಸ್.ಬಿ.ಆರ್.ಆರ್, ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತಾ), ಮೈಸೂರು, ಕಾಲೇಜಿನ ಸ್ನಾತಕೋತ್ತರ ಕೋರ್ಸುಗಳನ್ನು ಸಂಸ್ಥೆಯ ಬೇರೊಂದು ಕಟ್ಟಡಕ್ಕೆ ಬದಲಾವಣೆ ಮಾಡಲು ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡಿ ಸಲ್ಲಿಸಿರುವ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲು ವಿದ್ಯಾ ವಿಷಯಕ ಪರಿಷತ್ ಸಭೆಯು ತೀರ್ಮಾನಿಸಿತು.** |

<table>
<tr><td>II.12</td><td>ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ.<br>(“ಶ್ರೀಮತಿ. ಬಿ.ಟಿ ಶ್ಯಾಮಲ ವೈ ತಿಪ್ಪೇಸ್ವಾಮಿ ಚಿನ್ನದ ಪದಕ, “ಶ್ರೀ ಕೆ. ಸುಬ್ರಮಣ್ಯ ಸ್ಮರಣಾರ್ಥ ಚಿನ್ನದ ಪದಕ”)</td></tr>
<tr><td></td><td>
<table>
<tr><th>ಕ್ರಮ ಸಂಖ್ಯೆ</th><th>ದತ್ತಿಗಳ ಹೆಸರು</th><th>ಷರತ್ತುಗಳು</th><th>ಪಾವತಿಸಿರುವ ಮೊತ್ತ</th></tr>
<tr><td>01</td><td>“ಶ್ರೀಮತಿ. ಬಿ.ಟಿ ಶ್ಯಾಮಲ ವೈ ತಿಪ್ಪೇಸ್ವಾಮಿ ಚಿನ್ನದ ಪದಕ”</td><td>M.Sc.in Botany in first attempt and securing Highest Marks.</td><td>1,05,000/-</td></tr>
<tr><td>02</td><td>“ಶ್ರೀ ಕೆ. ಸುಬ್ರಮಣ್ಯ ಸ್ಮರಣಾರ್ಥ ಚಿನ್ನದ ಪದಕ”</td><td>M.B.A. in First Attempt and Securing Highest Marks to Student of B.N.Bahadur Institute of Management Science only).</td><td>1,25,000/-</td></tr>
</table>
</td></tr>
<tr><td>ತೀರ್ಮಾನ</td><td>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX) ಪ್ರಕಾರ, ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡಲು ದಾನಿಗಳು ದತ್ತಿಯ ನಿಬಂಧನೆಯಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿಯ ಹಣವನ್ನು ಮೇಲೆ ನಮೂದಿಸಿರುವ ಎರಡು ದಾನಿಗಳ ದತ್ತಿಯ ಷರತ್ತಿನಂತೆ ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕಗಳನ್ನು ನೀಡಬೇಕೆಂದು ಕೋರಿರುವ ಮನವಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯು ಅನುಮೋದಿಸಿತು.</td></tr>
<tr><td>II.13</td><td>ಯೂನಿವರ್ಸಿಟಿ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯಕ್ಕೆ ಡೀನರನ್ನು ನೇಮಿಸಿರುವ ಬಗ್ಗೆ-ಅನುಸಮರ್ಥನೆಗಾಗಿ.</td></tr>
<tr><td></td><td>ಮಾನ್ಯ ಕುಲಪತಿಗಳು ಮಾತನಾಡಿ, ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್‌ನ ನಿರ್ದೇಶಕರಾದ ಪ್ರೊ.ಬಿ.ಶಂಕರ್‌ರವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 21ರ ಅನ್ವಯ ಎರಡು ವರ್ಷಗಳ ಅವಧಿಗೆ ಹೊಸದಾಗಿ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯಕ್ಕೆ ಡೀನರಾಗಿ ನೇಮಕ ಮಾಡಲಾಗಿದೆ ಎಂದು ತಿಳಿಸಿದರು.<br>ಪ್ರೊ. ಹೆಚ.ಟಿ. ಬಸವರಾಜಪ್ಪರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ 5 ಡೀನ್‌ಗಳು ತಮ್ಮ ತಮ್ಮ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸುತಿದ್ದಾರೆ. ಈಗ 6 ಡೀನ್‌ಗಳಾಗಿದ್ದೇವೆ. ಸ್ಕೂಲ್ ಆಫ್ ಇಂಜಿನಿಯರಿಂಗ್ ವಿಜ್ಞಾನದ ವಿಷಯಕ್ಕೆ ಸಂಬಂಧಪಟ್ಟಿರುವುದರಿಂದ ಇದಕ್ಕೆ ಪ್ರತ್ಯೇಕ ಡೀನ್ ನೇಮಕ ಮಾಡಬಾರದು ಎಂದು ಈಗಾಗಲೇ ವಿಶ್ವವಿದ್ಯಾನಿಲಯಕ್ಕೆ ಪತ್ರವನ್ನು ಬರೆದಿರುತ್ತೇನೆ. ಎಲ್ಲಾ 5 ನಿಕಾಯದ ಡೀನ್‌ಗಳ ಸಲಹೆಯನ್ನು ಪಡೆಯದೇ ಏಕಾಏಕಿ ಸ್ಕೂಲ್ ಆಫ್ ಇಂಜಿನಿಯರಿಂಗ್‌ಗೆ ಡೀನರನ್ನಾಗಿ ನೇಮಕ ಮಾಡಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.<br>ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ, ಎಲ್ಲಾ ಕ್ಷೇತ್ರಕ್ಕೂ ಒಬ್ಬೊಬ್ಬರು ಡೀನ್‌ರುಗಳನ್ನಾಗಿ ನೇಮಕ ಮಾಡಲಾಗಿದೆ, ಇದೇರೀತಿ ಇಂಜಿನಿಯರಿಂಗ್ ಕ್ಷೇತ್ರಕ್ಕೂ ಸಹ ಒಬ್ಬರನ್ನು ಡೀನರನ್ನಾಗಿ ನೇಮಕ ಮಾಡಲಾಗಿದೆ ಎಂದು ತಿಳಿಸಿದರು.</td></tr>
<tr><td>ತೀರ್ಮಾನ</td><td>ಪ್ರೊ.ಬಿ.ಶಂಕರ್, ನಿರ್ದೇಶಕರು, ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ಮೈಸೂರು ಇವರನ್ನು ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯದ ಡೀನರನ್ನಾಗಿ ನೇಮಿಸಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು.</td></tr>
</table>

| | |
|---|---|
| II.14 | ಚೈನೀಸ್ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮುಖಾಂತರ ಪರೀಕ್ಷೆ ನಡೆಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ ಚೈನೀಸ್ ಪ್ರೋಗ್ರಾಂನ ಬಿ.ಟೆಕ್ ಮತ್ತು ಎಂ.ಎಸ್ ಪದವಿಯ ವಿದ್ಯಾರ್ಥಿಗಳಿಗೆ ಮೊದಲನೇ ಮತ್ತು 3ನೇ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸಬೇಕಾಗಿತ್ತು, ಚೀನಾ ದೇಶದಲ್ಲಿ ಕೋವಿಡ್-19 ಹೆಚ್ಚಾಗಿರುವ ಕಾರಣ ಪರೀಕ್ಷೆಗಳು ನಡೆಸಿರುವುದಿಲ್ಲ ಹಾಗೂ 2021-22ನೇ ಶೈಕ್ಷಣಿಕ ಸಾಲಿನಲ್ಲಿ ಬಿ.ಟೆಕ್ ಮತ್ತು ಎಂ.ಎಸ್ ಪದವಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಪ್ರವೇಶಾತಿ ಅನುಮೋದನೆಯು ಮೇ ತಿಂಗಳಿನಲ್ಲಿ ದೊರಕಿರುವುದರಿಂದ ಪ್ರವೇಶಾತಿ ಮಾಡಿಕೊಂಡಿರುವುದಿಲ್ಲ ಎಂದು ಸಭೆಗೆ ತಿಳಿಸಿದರು. |
| ತೀರ್ಮಾನ | **2022-23ನೇ ಶೈಕ್ಷಣಿಕ ಸಾಲಿನಲ್ಲಿ ಚೈನೀಸ್ ವಿದ್ಯಾರ್ಥಿಗಳಿಗೆ ಚೈನೀಸ್ ಪ್ರೋಗ್ರಾಂನ ಬಿ.ಟೆಕ್ ಮತ್ತು ಎಂ.ಎಸ್ ಪದವಿಯ ಪರೀಕ್ಷೆಗಳನ್ನು ಆನ್‌ಲೈನ್ ಮೂಲಕ(1,2,3 ಮತ್ತು 4 ಸೆಮಿಸ್ಟರ್‌ನ) ನಡೆಸಲು ಹಾಗೂ 2022-23ನೇ ಶೈಕ್ಷಣಿಕ ಸಾಲಿಗೆ ಬಿ.ಟೆಕ್ ಮತ್ತು ಎಂ.ಎಸ್.ಪದವಿಗಳಿಗೆ ಪ್ರವೇಶಾತಿ ಮಾಡಿಕೊಳ್ಳಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.15 | New Proposed Fee Structure for Online Programs Common Fee Types-Post graduate degree and Diploma. |
| **Decision** | **New proposed fee structure for online programs for common fee types for Post Graduate degree and Diploma are approved.** |

**ಇತರೆ ವಿಷಯಗಳು:**

| | |
|---|---|
| 1 | ಶ್ರೀ ಸಿ.ಎನ್.ಮಂಜೇಗೌಡ, ವಿಧಾನ ಪರಿಷತ್ ಸದಸ್ಯರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಯಕ್ಕೆ ನಾನು ಒಂದು ಪತ್ರ ಬರೆದಿರುತ್ತೇನೆ, ಆ ಪತ್ರದಲ್ಲಿ ನಾನು ಅನೇಕ ಪ್ರಶ್ನೆಗಳನ್ನು ಕೇಳಿರುತ್ತೇನೆ ಒಂದಕ್ಕೂ ಸಹ ಸರಿಯಾಗಿ ಉತ್ತರ ನೀಡಿಲ್ಲ, ಒಬ್ಬ ಜನಪ್ರತಿನಿಧಿಯಾಗಿ ನನ್ನ ಪತ್ರಕ್ಕೆ ಉತ್ತರ ಸಿಗುವುದು ಇಷ್ಟು ತಡವಾದರೆ ಇನ್ನು ವಿಶ್ವವಿದ್ಯಾನಿಲಯದಲ್ಲಿ ಕಾರ್ಯವೈಖರಿಗಳು ಹೇಗೆ ನಡೆಯುತ್ತಿದೆ ಎಂದು ಪ್ರಶ್ನಿಸಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ, ತಮ್ಮ ಪತ್ರಕ್ಕೆ ಇನ್ನೊಂದು ವಾರದಲ್ಲಿ ಉತ್ತರ ನೀಡುವುದಾಗಿ ತಿಳಿಸಿದರು.<br><br>ಮುಂದುವರೆದು ಮಾತನಾಡಿ ನ್ಯಾಕ್ ಗ್ರೇಡ್ ವಿಷಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಈ ಮೊದಲು A++ ಇತ್ತು, ನಂತರ A+ ಆಯಿತು, ಈಗ Aಗೆ ಬಂದು ತಲುಪಿರುತ್ತದೆ. ಇದಕ್ಕೆ ಕಾರಣವೇನು ಎಂದು ಪ್ರಶ್ನಿಸಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯ ನ್ಯಾಕ್ ಗ್ರೇಡ್‌ನಲ್ಲಿ A+ ಇತ್ತು ಆದರೆ A++ ಇರಲಿಲ್ಲ ಹಾಗೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಳೆದ 2007ರಿಂದ ಖಾಯಂ ಅಧ್ಯಾಪಕರುಗಳ ನೇಮಕಾತಿ ನಡೆಯದೆ ಇರುವುದು ಮತ್ತು ನಮ್ಮಲ್ಲಿರುವ ಅತಿಥಿ ಉಪನ್ಯಾಸಕರುಗಳಿಗೆ ಯುಜಿಸಿಯು ಅಂಕ ನೀಡದೆ ಇರುವುದರಿಂದ ಅಂಕ ಕಡಿಮೆಯಾಗಿರುತ್ತದೆ ಎಂದು ತಿಳಿಸಿದರು. ಇದಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ತಮಗೆ ನೀಡಲಾಗುವುದು ಎಂದು ತಿಳಿಸಿದರು. ನಮ್ಮಲ್ಲಿ ಅಧ್ಯಾಪಕರುಗಳ ಅಭಾವ ಹಾಗೂ ಸಂಶೋಧನೆಗಳ ಕೊರತೆಗಳಿಂದ ಈ ಬಾರಿ ವಿಶ್ವವಿದ್ಯಾನಿಲಯಕ್ಕೆ ನ್ಯಾಕ್ ರ್ಯಾಕಿಂಗ್‌ನಲ್ಲಿ ಹಿನ್ನಡೆಯಾಗಿರುತ್ತದೆ ಎಂದು ತಿಳಿಸಿದರು.<br><br>ಶ್ರೀ ಸಿ.ಎನ್.ಮಂಜೇಗೌಡರವರು ಮುಂದುವರೆದು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಘನತೆಯನ್ನು ಉಳಿಸಿಕೊಳ್ಳಬೇಕಾಗಿದೆ ಇದರ ಅಭಿವೃದ್ಧಿ ಕಡೆ ಗಮನ ನೀಡಬೇಕೆಂದು ಸಲಹೆ ನೀಡಿದರು. ನಂತರ ಪಠ್ಯ ಪುಸ್ತಕಗಳ ಬಗ್ಗೆ ಹೇಳುವುದಾದರೆ ಎಷ್ಟು ವರ್ಷಕ್ಕೊಮ್ಮೆ ಬದಲಾವಣೆ ಮಾಡಲಾಗುತ್ತಿದೆ ಎಂದು ಪ್ರಶ್ನಿಸಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು, ನಿಯಮಾನುಸಾರ ಮೂರು ವರ್ಷಕ್ಕೊಮ್ಮೆ ಪಠ್ಯಪುಸ್ತಕಗಳ ಬದಲಾವಣೆ ಮಾಡಲಾಗುತ್ತಿದೆ. ಅವಧಿಗೂ ಮುನ್ನವೇ ಬದಲಾವಣೆ ಮಾಡಬೇಕಾದ ಸಂದರ್ಭ ಬಂದಾಗ ಮಾತ್ರ ಮಾಡಲಾಗುತ್ತದೆ ಎಂದು ತಿಳಿಸಿದರು.<br><br>ಮೈಸೂರು ವಿಶ್ವವಿದ್ಯಾನಿಲಯ ಬಿ.ಕಾಂ ಎಲ್‌ಎಲ್‌ಬಿ ಪ್ರೋಗ್ರಾಂ (ಕೋರ್ಸ್) ನಡೆಸುವುದಕ್ಕೆ ಬಾರ್ ಕೌನ್ಸಿಲ್ ಆಫ್ ಇಂಡಿಯಾದಿಂದ ಅನುಮತಿ ಪಡೆಯಲಾಗಿದೆಯಾ ಎಂದು ಪ್ರಶ್ನಿಸಿದರು? |

| | |
|---|---|
| | ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ, ಬಿ.ಎ, ಎಲ್‌ಎಲ್‌ಬಿ ಪ್ರೋಗ್ರಾಂ ನಡೆಸುವುದಕ್ಕೆ ವಿಶ್ವವಿದ್ಯಾನಿಲಯ ಬಾರ್ ಕೌನ್ಸಿಲ್ ಆಫ್ ಇಂಡಿಯಾದಿಂದ ಈಗಾಗಲೇ ಅನುಮತಿಯನ್ನು ಪಡೆಯಲಾಗಿದೆ. ನಾನು ಕುಲಪತಿಯಾಗಿ ನೇಮಕಗೊಳ್ಳುವ ಮುನ್ನವೆ ವಿಶ್ವವಿದ್ಯಾನಿಲಯದಲ್ಲಿ ಬಿ.ಕಾಂ ಎಲ್‌ಎಲ್‌ಬಿ ಪ್ರೋಗ್ರಾಂ ಪ್ರಾಂರಭಿಸಲಾಗಿರುತ್ತದೆ. ಆದರೆ ಬಾರ್ ಕೌನ್ಸಿಲ್ ಆಫ್ ಇಂಡಿಯಾದಿಂದ ಅನುಮತಿ ಪಡೆದಿರುವುದಿಲ್ಲ. ಬಾರ್ ಕೌನ್ಸಿಲ್ ಆಫ್ ಇಂಡಿಯಾಕ್ಕೆ ಈ ಕುರಿತು ವಿವರಿಸಿ ಪತ್ರ ಬರೆಯಲಾಗಿದೆ. ಸದರಿಯವರು ನಮ್ಮ ಕೋರಿಕೆಯನ್ನು ಸ್ಪಂದಿಸಿದ್ದಾರೆ ಸಧ್ಯದಲ್ಲೇ ಬಾರ್ ಕೌನ್ಸಿಲ್ ಆಫ್ ಇಂಡಿಯಾದಿಂದ ಅನುಮತಿ ಸಿಗಲಿದೆ ಎಂದು ಉತ್ತರಿಸಿದರು.<br><br>ಶ್ರೀ ಸಿ.ಎನ್ ಮಂಜೇಗೌಡರವರು ಮಾತನಾಡಿ, ವಿಶ್ವವಿದ್ಯಾನಿಲಯ ಬಾರ್ ಕೌನ್ಸಿಲ್ ಆಫ್ ಇಂಡಿಯಾದವರ ಅನುಮತಿ ಪಡೆಯದೆ ಬಿ.ಕಾಂ ಎಲ್‌ಎಲ್‌ಬಿ ಪ್ರೋಗ್ರಾಂ ನಡೆಸುತ್ತಿರುವುದು ನಮ್ಮ ಗಮನಕ್ಕೆ ಬಂದಿರುತ್ತದೆ. ಮಾನ್ಯತೆಯೇ ಇಲ್ಲದ ಬಿ.ಕಾಂ ಎಲ್‌ಎಲ್‌ಬಿ ಪ್ರೋಗ್ರಾಂನ್ನು ಪ್ರಾರಂಭಿಸಿರುವುದು ವಿಧ್ಯಾರ್ಥಿಗಳ ಭವಿಷ್ಯದ ಬಗ್ಗೆ ಏನು ಪರಿಣಾಮ ಬೀರುತ್ತದೆ ಎಂದು ಗಮನಿಸಲಾಗಿದೆಯಾ ಎಂದು ಪ್ರಶ್ನಿಸಿದರು? ಇದಕ್ಕೆ ಶ್ರೀ ಶಶಿಕುಮಾರ್ ಸಹ ಬೆಂಬಲ ವ್ಯಕ್ತಪಡಿಸಿದರು, ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯ ಬಿ.ಎ, ಎಲ್‌ಎಲ್‌ಬಿ. ಪ್ರೋಗ್ರಾಂಗೆ 2014ರಲ್ಲೇ ಅನುಮತಿ ಪಡೆಯಲಾಗಿದೆ, ನಾನು ಕುಲಪತಿಯಾಗಿ ನೇಮಕಗೊಳ್ಳುವ ಮುಂಚೆಯೆ ಬಿ.ಕಾಂ.ಎಲ್.ಎಲ್.ಬಿ ಪ್ರೋಗ್ರಾಂ ಪ್ರಾರಂಭವಾಗಿದೆ ಬಾರ್ ಕೌನ್ಸಿಲ್ ಆಫ್ ಇಂಡಿಯಾದವರು ಕೋರಿರುವ ಮಾಹಿತಿಯನ್ನು ನೀಡಲಾಗಿದೆ ಸಧ್ಯದಲ್ಲೇ ಬಿ.ಕಾಂ ಎಲ್‌ಎಲ್‌ಬಿ ಪ್ರೋಗ್ರಾಂಗೆ ಅನುಮತಿ ನೀಡುತ್ತಾರೆ ಎಂದು ತಿಳಿಸಿದರು.<br><br>ಕಾನೂನು ನಿಕಾಯದ ಡೀನರಾದ ಪ್ರೊ. ಟಿ.ಆರ್. ಮಾರುತಿರವರು ಮಾತನಾಡಿ, 2014ರಲ್ಲಿ ಕಾನೂನು ಶಾಲೆ ಪ್ರಾರಂಭಿಸಿದ್ದು ಬಿ.ಎ.ಎಲ್‌ಎಲ್‌ಬಿ ಪ್ರೋಗ್ರಾಂ ನಡೆಸುವುದಕ್ಕೆ ಬಾರ್ ಕೌನ್ಸಿಲ್ ಆಫ್ ಇಂಡಿಯಾದಿಂದ ಅನುಮತಿ ಪಡೆಯಲಾಗಿತ್ತು, ನಂತರ ಕಳೆದ 6ವರ್ಷಗಳಿಂದ ಬಿ.ಕಾಂ ಎಲ್‌ಎಲ್‌ಬಿ. ಪ್ರೊಗ್ರಾಂ ಕೂಡ ಪ್ರಾರಂಭಿಸಿರುತ್ತೇವೆ ಆದರೆ ಬಾರ್ ಕೌನ್ಸಿಲ್‌ನಿಂದ ಅನುಮತಿ ಪಡೆದಿರುವುದಿಲ್ಲ. ಕಳೆದ ವಾರ ಬಾರ್ ಕೌನ್ಸಿಲ್‌ನಿಂದ ಆನ್‌ಲೈನ್‌ನಲ್ಲಿ ಇದರ ಕುರಿತು ಚರ್ಚಿಸಿರುತ್ತೇವೆ ಹಾಗೂ ಅವರು ಸ್ಪಷ್ಟೀಕರಣ ಕೇಳಿರುತ್ತಾರೆ ಅದನ್ನು ನಾವು ಪೂರೈಸಿರುತ್ತೇವೆ, ಅವರು ಕೂಡ ನಮ್ಮ ಮನವಿಯನ್ನು ಪುರಸ್ಕರಿಸಿರುತ್ತಾರೆ ಸದ್ಯದಲ್ಲೇ ಅನುಮತಿಯನ್ನು ಸಹ ನೀಡುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು.<br><br>ಶ್ರೀ ಸಿ.ಎನ್ ಮಂಜೇಗೌಡರವರು ಮಾತನಾಡಿ, ಆದಷ್ಟು ಬೇಗ ಬಿ.ಕಾಂ ಎಲ್‌ಎಲ್‌ಬಿ. ಪ್ರೋಗ್ರಾಂಗೆ ಬಾರ್ ಕೌನ್ಸಿಲ್ ಆಫ್ ಇಂಡಿಯಾದ ಅನುಮತಿ ಪಡೆಯಲು ಸಲಹೆ ನೀಡಿದರು. |
| 2 | ಶ್ರೀ ಸಿ.ಎನ್.ಮಂಜೇಗೌಡರವರು ಈ ಕೆಳಕಂಡಂತೆ ಮಾಹಿತಿ ಕೋರಿದರು.<br><br>**ಅ)** 2022-23ನೇ ಸಾಲಿನಲ್ಲಿ ಇಂಜಿನಿಯರಿಂಗ್ ಕಾಲೇಜಿಗೆ ಎಷ್ಟು ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ ಎಂದು ಪ್ರಶ್ನಿಸಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಸದ್ಯದಲ್ಲೇ ಮಾಹಿತಿ ನೀಡುವುದಾಗಿ ತಿಳಿಸಿದರು.<br><br>**ಆ)** 2022-23ನೇ ಇಂಜಿನಿಯರಿಂಗ್ ಕಾಲೇಜಿಗೆ ಶಿಕ್ಷಕರನ್ನು ನೇಮಿಸಲಾಗಿದೆ ಅದರಲ್ಲಿ ಎಷ್ಟು ಖಾಯಂ ನೌಕರರು ಹಾಗೂ ಎಷ್ಟು ತಾತ್ಕಾಲಿಕ ನೌಕರರು ಎಂದು ಪ್ರಶ್ನಿಸಿದರು. ಮಾನ್ಯ ಕುಲಪತಿಗಳು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿಗೆ 17 ಅಧ್ಯಾಪಕರುಗಳನ್ನು ತಾತ್ಕಾಲಿಕವಾಗಿ ನೇಮಕ ಮಾಡಲಾಗಿದೆ. ಹಾಗೂ ವಿಶ್ವವಿದ್ಯಾನಿಲಯದ ಒಬ್ಬರು ಖಾಯಂ ಅಧ್ಯಾಪಕರನ್ನು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿಗೆ ನಿಯೋಜಿಸಲಾಗಿದೆ ಎಂದು ತಿಳಿಸಿದರು.<br><br>**ಇ)** ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಮೈಸೂರು ಮೆಡಿಕಲ್ ಕಾಲೇಜು ಇತ್ತು ಕಾಲಾಂತರದಲ್ಲಿ ಇದು ಬೇರೆ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಯಾಗಿರುತ್ತದೆ. ತಾವು ವಿಶ್ವವಿದ್ಯಾನಿಲಯದಲ್ಲಿ ಇಂಜಿನಿಯರಿಂಗ್ ಕಾಲೇಜು ಪ್ರಾರಂಭ ಮಾಡುವ ಬದಲು ಮೆಡಿಕಲ್ ಕಾಲೇಜು ಪ್ರಾರಂಭ ಮಾಡುವುದಕ್ಕೆ ಸಾಕಷ್ಟು ಸ್ಥಳ ಇದ್ದರೂ ಕೂಡ ಏಕೆ ಮೆಡಿಕಲ್ ಕಾಲೇಜು ಪ್ರಾರಂಭ ಮಾಡಲಿಲ್ಲ ಎಂದು ಪ್ರಶ್ನಿಸಿದರು. |

| | |
|---|---|
| | ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ, ಮೆಡಿಕಲ್ ಕಾಲೇಜು ಪ್ರಾರಂಭ ಮಾಡಲು ಜಮೀನು ಅಲ್ಪ ಪ್ರಮಾಣದಲ್ಲಿದ್ದ ಕಾರಣ ಮತ್ತು ಹಣದ ಅಭಾವದಿಂದ ಸಾಧ್ಯವಾಗಿರಲಿಲ್ಲ, ಆದರೆ ಈಗ ಮೆಡಿಕಲ್ ಕಾಲೇಜು ಪ್ರಾರಂಭ ಮಾಡುವುದಕ್ಕೆ ಸ್ಥಳಾವಕಾಶ ಮಾಡಿಕೊಂಡು ಸರ್ಕಾರದಿಂದ ಕೂಡಲೇ ಅನುಮತಿ ಹಾಗೂ ಅನುದಾನ ತರಿಸುವ ಪ್ರಯತ್ನ ಮಾಡುತ್ತೇವೆ ಎಂದು ತಿಳಿಸಿದರು.<br><br>**ಈ)** ಡಿ-ಫಾರ್ಮ (D-Pharma) ಕಾಲೇಜು ಪ್ರಾರಂಭಕ್ಕೆ ಸಂಬಂಧಿಸಿದಂತೆ ಮಾನ್ಯ ಕುಲಪತಿಗಳು ಮಾತನಾಡಿ, ಡಿ-ಫಾರ್ಮ (D-Pharma) ಕಾಲೇಜು ಪ್ರಾರಂಭಕ್ಕೆ ಸರ್ಕಾರದ ಅನುಮತಿಗಾಗಿ ನಾವು ಈಗಾಗಲೇ ಪತ್ರ ಬರೆದಿರುತ್ತೇವೆ, ಸರ್ಕಾರದ ಅನುಮತಿ ಪಡೆದು ಆದಷ್ಟು ಬೇಗ ವಿಶ್ವವಿದ್ಯಾನಿಲಯದಲ್ಲಿ ಡಿ-ಫಾರ್ಮ (D-Pharma) ಕಾಲೇಜು ಪ್ರಾರಂಭಿಸುವುದಾಗಿ ತಿಳಿಸಿದರು.<br><br>**ಉ)** ಸ್ವಾಯತ್ತ ಕಾಲೇಜುಗಳ ಪಠ್ಯಕ್ರಮ ಬಗ್ಗೆ ಹಾಗೂ ಪರೀಕ್ಷೆಗಳು ಹೇಗೆ ನಡೆಯುತ್ತಿದೆ ಮತ್ತು ಸ್ವಾಯತ್ತ ಕಾಲೇಜುಗಳಿಂದ ವಿಶ್ವವಿದ್ಯಾನಿಲಯಕ್ಕೆ ಯಾವ ರೀತಿಯಲ್ಲಿ ಅನುಕೂಲ ಮತ್ತು ಅನಾನುಕೂಲವಾಗುತ್ತಿದೆ ಎಂದು ಪ್ರಶ್ನಿಸಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ, ಮುಂದಿನ ಸಭೆಯಲ್ಲಿ ಇದರ ಬಗ್ಗೆ ಮಾಹಿತಿಯನ್ನು ನೀಡುವುದಾಗಿ ತಿಳಿಸಿದರು. |
| 3 | ಶ್ರೀ ಎಂ.ಪಿ.ಶಶಿಕುಮಾರ್‌ರವರು ಮಾತನಾಡಿ, ಕಳೆದ ಸಭೆಯ ನಡವಳಿಗಳು ನಮಗೆ ತಲುಪಿಲ್ಲ, ಎಂದು ಸಭೆಯ ಗಮನಕ್ಕೆ ತಂದರು ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ, ನಡವಳಿಗಳು ಸಮಯಕ್ಕೆ ಸರಿಯಾಗಿ ನೀಡುವುದಾಗಿ ತಿಳಿಸಿದರು. |
| 4 | ಶ್ರೀ.ಎಂ.ಸಿ. ರಾಜಶೇಖರ್‌ರವರು ಮಾತನಾಡಿ, ಸಿಂಡಿಕೇಟ್ ಸದಸ್ಯರಿಗೆ ಮನ್ನಣೆ ನೀಡುವಂತೆ ನಮ್ಮ ವಿದ್ಯಾ ವಿಷಯಕ ಪರಿಷತ್ ಮಂಡಳ ಸಭೆಯ ಸದಸ್ಯರಿಗೆ ಸಿಗುತ್ತಿಲ್ಲ ಏಕೆ ಎಂದು ಪ್ರಶ್ನಿಸಿದರು.<br><br>ಶ್ರೀ ಎಂ.ಪಿ. ಶಶಿಕುಮಾರ್‌ರವರು ಮಾತನಾಡಿ, ಶಿಕ್ಷಣ ಮಂಡಳ ಸದಸ್ಯರುಗಳನ್ನು ಕಡೆಗಣಿಸಲಾಗುತ್ತಿದೆ. ಇದು ಎಂತಹ ನ್ಯಾಯ, ಸಿಂಡಿಕೇಟ್ ಸದಸ್ಯರಿಗೆ ಮಾತ್ರ ಸಮಿತಿಯ ಸದಸ್ಯರಾಗಲು ಅವಕಾಶ ಮಾಡಿಕೊಡಲಾಗುತ್ತಿದೆ. ಆದರೆ ಶಿಕ್ಷಣ ಮಂಡಳ ಸದಸ್ಯರಿಗೆ ಅವಕಾಶ ಮಾಡಿಕೊಡುತ್ತಿಲ್ಲ ಎಂದು ಆರೋಪಿಸಿದರು. ಮಾನ್ಯ ಕುಲಪತಿಗಳು ಶಿಕ್ಷಣ ಮಂಡಳಿಯ ಸದಸ್ಯರಿಗೂ ಸಹ ಸಮಿತಿಯ ಸದಸ್ಯರಾಗಲು ಅವಕಾಶ ಮಾಡಿಕೊಡುವುದಾಗಿ ತಿಳಿಸಿದರು. |
| 5 | ಪ್ರೊ. ಹೆಚ್.ಟಿ.ಬಸವರಾಜಪ್ಪರವರು ಮಾತನಾಡಿ, ಪಿಹೆಚ್.ಡಿ. ಪದವಿಗಾಗಿ ಹೆಚ್ಚುವರಿ ವಿದ್ಯಾರ್ಥಿಗಳನ್ನು ಪರಿಗಣಿಸಲು ಪ್ರೊ. ಜಿ.ಟಿ. ರಾಮಚಂದ್ರಪ್ಪ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಇವರು ಪತ್ರವನ್ನು ಬರೆದಿರುತ್ತಾರೆ. ನಾನು ಕೂಡ ಪಿಹೆಚ್.ಡಿ. ಪದವಿಗಾಗಿ ಹೆಚ್ಚುವರಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅನುಮತಿ ನೀಡಬೇಕೆಂದು ಕೋರಿದರು.<br><br>ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ, ಸದರಿ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| 6 | ಪ್ರೊ. ಹೆಚ್.ಟಿ. ಬಸವರಾಜಪ್ಪರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕವನ್ನು ಸ್ನಾತಕೋತ್ತರ ವಿಭಾಗದಲ್ಲಿ ವಿಷಯದ ಪ್ರಕಾರ (subject wise) ನೀಡಲಾಗುತ್ತಿದೆ, ಚಿನ್ನದ ಪದಕವನ್ನು ನೀಡುವಲ್ಲಿ ಪಕ್ಷಪಾತವಾಗುತ್ತಿದೆ ಎಂದು ನನ್ನ ಅನ್ನಿಸಿಕೆ. ಏಕೆಂದರೆ ಸ್ನಾತಕೋತ್ತರ ವಿಭಾಗದಲ್ಲಿ ಅಧ್ಯಾಪಕರು ತಮಗೆ ಬೇಕಾದ ವಿದ್ಯಾರ್ಥಿಗಳಿಗೆ ಹೆಚ್ಚು ಅಂಕವನ್ನು ನೀಡಿ ಅವರಿಗೆ ಚಿನ್ನದ ಪದಕ ಬರುವ ಹಾಗೆ ಮಾಡುತ್ತಾರೆ. ಇದರಿಂದ ಅರ್ಹತೆ ಇರುವ ವಿದ್ಯಾರ್ಥಿಗಳು ಚಿನ್ನದ ಪದಕದಿಂದ ವಂಚಿತರಾಗುವ ಸಂಭವ ಇದೆ. ಈ ಹಿನ್ನೆಲೆಯಲ್ಲಿ ಸಾಕಷ್ಟು ದೂರುಗಳು ಬಂದಿರುತ್ತದೆ. ನನ್ನ ಅನಿಸಿಕೆ ಎರಡು ಬಾರಿ ಮೌಲ್ಯಮಾಪನ ಮಾಡುವುದರಿಂದ ಪಕ್ಷಪಾತ ಮಾಡುವ ಪ್ರಮೇಯ ಬರುವುದಿಲ್ಲ, ದಯಮಾಡಿ ಚಿನ್ನದ ಪದಕ ನೀಡುವ ಮುನ್ನ ಎರಡು ಬಾರಿ ಮೌಲ್ಯಮಾಪನಕ್ಕೆ ಅವಕಾಶ ಮಾಡಿಕೊಡಬೇಕಾಗಿ ಮನವಿ ಮಾಡಿಕೊಳ್ಳುತ್ತೇನೆ. |

| | |
|---|---|
| | ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ, ಎರಡು ಬಾರಿ ಮೌಲ್ಯಮಾಪನ ಮಾಡುವುದು ಬೇಡ ಎಂದು ಈಗಾಗಲೇ ತೀರ್ಮಾನ ಮಾಡಲಾಗಿದೆ ತಾವು ಸಹ ಒಪ್ಪಿಗೆಯನ್ನು ನೀಡಿರುತ್ತೀರಿ ಎಂದು ತಿಳಿಸಿದರು.<br><br>ಪ್ರೊ. ಹೆಚ್.ಟಿ ಬಸವರಾಜಪ್ಪರವರು ಮಾತನಾಡಿ, ಚಿನ್ನದ ಪದಕ ನೀಡುವ ವಿಷಯದಲ್ಲಿ ಅಧ್ಯಾಪಕರಲ್ಲಿ ಪಕ್ಷಪಾತ ನಡೆಯುವ ಸಂಭವ ಇರುವ ಕಾರಣ, ಎರಡು ಬಾರಿ ಮೌಲ್ಯಮಾಪನ ಮಾಡುವುದು ಉತ್ತಮ, ಏಕೆಂದರೆ ಚಿನ್ನದ ಪದಕ ಅರ್ಹರಿಗೆ ಸಲ್ಲಬೇಕು ಎಂದು ನನ್ನ ಅನಿಸಿಕೆ ಎಂದು ತಿಳಿಸಿದರು. ಮಾನ್ಯ ಕುಲಪತಿಗಳು ಮಾತನಾಡಿ, ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಸಹಿ/-
**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ**

ಸಹಿ/-
**ಕುಲಪತಿಗಳು ಮತ್ತು ಅಧ್ಯಕ್ಷರು**